


ಚಿತ್ರಗುಪ್ತ ಪತ್ರಿಕೆಯಲ್ಲಿ 1945ರಲ್ಲಿ ಪ್ರಕಟವಾದ ವಾಸು ಅವರ ಚಿತ್ರ

ಖತ್ರಿಯವರು ಚಿತ್ರಿಸಿದ, ಗಾಂಧಿಯವರ ಹಲವು ಚಟುವಟಿಕೆಗಳ ಎಂಟು ವರ್ಣಚಿತ್ರಗಳಿವೆ.

ಗಾಂಧಿಯವರನ್ನು ಕುರಿತಂತೆ ಅವರನ್ನು ದೈವಿಕತೆಯ ಹತ್ತಿರಕ್ಕೆ ಕೊಂಡೊಯ್ದ ಕ್ಯಾಲೆಂಡರ್ ಕಲಾಪ್ರಕಾರ, ಭಿತ್ತಿಪತ್ರ, ಸಾಂದರ್ಭಿಕ ಚಿತ್ರ (ಆ ಸಂದರ್ಭದ ಭಾರತೀಯ ಪತ್ರಿಕೆಗಳ ಶಂಕರ್, ವಾಸು, ಬೀರೇಶ್ವರ್, ಅಹಮದ್, ರಂಗ, ಆರ್.ಎಸ್. ನಾಯ್ಡು ಇಲ್ಲಿ ನೆನಪಾಗುತ್ತಾರೆ), ಕ್ಯಾರಿಕೇಚರ್‌ಗಳೇ ಅಲ್ಲದೆ, ಕಾಮಿಕ್ಸ್ ಚಿತ್ರಸಾಹಿತ್ಯ ಪ್ರಕಾರಗಳಲ್ಲಿಯೂ ವಿಶಿಷ್ಟವಾಗಿ ಅಭಿವ್ಯಕ್ತಿಸಲಾಗಿದೆ. ಧನ್ಯತಾಭಾವ, ಪೂಜ್ಯ ಭಾವಗಳೇ ಅಲ್ಲದೆ ಟೀಕೆ, ಆರಾಧನಾ ಮನೋಧರ್ಮದ ಅಭಿವ್ಯಕ್ತಿಗಳೂ ಹಲವು ಪ್ರಕಾರಗಳಲ್ಲಿ ಕಾಣಿಸಿಕೊಂಡಿವೆ. ಕ್ರೋಮೋ ಲಿತೋಗ್ರಾಫ್ ಪ್ರಿಂಟ್, ಕಟೌಟ್ ಪೇಂಟಿಂಗ್ ಹಿನ್ನೆಲೆಯ ಕೃತಿಗಳು ಕಾಣಿಸಿಕೊಂಡಿವೆ.

ದೃಶ್ಯಕಲಾವಿದರ ಕಲ್ಪನೆಯ ಲೋಕದಲ್ಲಿ ಗಾಂಧಿಯ ಮರುಹುಟ್ಟು ಕೌತುಕಮಯವೆಂಬಂತೆ ಇಡೀ ಭಾರತದಲ್ಲಿ ಗಾಂಧಿಯವರನ್ನು ವಿಭಿನ್ನವಾಗಿ ನೋಡುವ ಪ್ರವೃತ್ತಿಯ ಅಭಿವ್ಯಕ್ತಿಗಳೂ ಕಾಣಿಸಿಕೊಂಡಿವೆ. ನಮ್ಮ ಸಮಕಾಲೀನ ಸಂದರ್ಭದ ಕಲಾವಿದರ ನೋಟ, ಮರುನೋಟ, ವಿಮರ್ಶೆ, ಟೀಕೆ, ಮರುಪರಿಶೀಲನೆಗಳ ನಡುವೆ, ಇಂದಿಗೂ ಪ್ರಸ್ತುತವಾಗುವ ಗಾಂಧಿಯ ಚಿಂತನೆ, ಜೀವನ ಸೌಂದರ್ಯಗಳ ತಾತ್ವಿಕ ಚಿಂತನೆಯ ಅಗತ್ಯ ಇತ್ಯಾದಿಗಳ ಅಭಿವ್ಯಕ್ತಿಗಳು ಗಣನೀಯವಾಗಿ ಕಾಣಿಸಿಕೊಳ್ಳುತ್ತಲೇ ಇವೆ.

ಇಡಿಯಾಗಿ ಗಮನಿಸಿದರೆ ಇಂತಹ ಸಂವೇದನಾಶೀಲರಿಂದ ರಾಷ್ಟ್ರಪಿತನನ್ನು ಭಾರತೀಯ ಸ್ವಾತಂತ್ರ್ಯ ಚಳವಳಿಯ ಕೇಂದ್ರಬಿಂದುವಾಗಿ ನೋಡುವ, ಮತ್ತು ಶ್ರದ್ಧಾಂಜಲಿಯ ಪ್ರಕ್ರಿಯೆಯ ಫಲವಾದ ಅಭಿವ್ಯಕ್ತಿಗಳೂ ಕಾಣಿಸಿಕೊಂಡಿವೆ. ಶೇಖರ್ ಬಳ್ಳಾರಿಯವರ ಸೃಷ್ಟಿಶೀಲತೆಯಲ್ಲಿ ಗಾಂಧಿಯವರ ಕುರಿತ ತೀಕ್ಷ್ಣ ಗ್ರಹಿಕೆಗಳ ಹಲವು ಕೃತಿಗಳು ಮೂಡಿಬಂದಿವೆ. ಅತುಲ್ ದೊಡಿಯಾರವರು ಗೋಧ್ರಾ ಗಲಭೆಗಳ ಹಿನ್ನೆಲೆಯಲ್ಲಿ ಗಾಂಧಿ ಹುಟ್ಟೂರಿಗೆ ಭೇಟಿ ನೀಡಿ, ಅವರನ್ನು ತಮ್ಮ